182(4)

CONQUER GENERAL SEXUAL DEBILITIES WITH SHAKTI SUDHA

Reg No. M 1299 • Founded 1917 • Daily & Weekly

ಸೋಮವಾರದ

ಸತ್ಯವಾದಿ
SATYAVADI

(ಅರಮನೆ ಸೇವಕ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 28 ಸಂಚಿಕೆ 137] ಸೋಮವಾರ 19—2—45 [6 ಪೈ

ಚಿನ್ನ, ಬೆಳ್ಳಿ, ವಜ್ರವೈಢೂರ್ಯಗಳು,
ಅಮೂಲ್ಯ ರತ್ನಗಳು ಮಾತ್ರ ಗುಣಕಾರಿ

ಡಿ ಸೆಂ ಬಿ ಸ್ಟೈ ಡ್

ಮತ್ತು

ಝಂಡ ಕಂಪೆನಿಯ ಔಷಧಿಗಳು

ಬೀ ಕಾದರಿ

ಕಾಂತರಾಜ್ & ಕೋ

ರವೆ ಬೀದಿ, ಮೈಸೂರು.

ವಿವಿಧ ವರ್ತಮಾನ

ಮೈಸೂರು ಗೆಜಿಟ್ಟಿನ ದರವನ್ನು ರೂ. 15 ರಿಂದ 30 ಕ್ಕೆ ಹೆಚ್ಚಿಸಿದೆ.

ಸಯಾಂ ಅರಮನೆಯಲ್ಲಿ ಈಗಲೂ ಬ್ರಾಹ್ಮಣ ಪುರೋಹಿತರಿರುವರು.

ಆತಂರಾಷ್ಟ್ರೀಯ ಜ್ಯಾಂಕನ್ನು ಸ್ಥಾಪಿಸಲು ಪ್ರೆಸಿಡೆಂಟ್ ರೂಸ್ವೆಲ್ಟರ ಆಲೋಚನೆಯಲ್ಲಿದೆ.

ಟೋಕಿಯೋ ಮೇಲೆ ಭಾರಿ ಧಾಳಿ ನಡೆಸಲಾಗಿದೆ, 1400 ವಿಮಾನಗಳು ಭಾಗವಹಿಸಿದ್ದವು.

ಜರ್ಮನಿಯಲ್ಲಿನ ಎಲ್ಲಾ ಜರ್ಮನ್ ಹೆಂಗಸರೂ ರಣರಂಗಕ್ಕೆ ಹಾಜರಾಗಬೇಕೆಂದು ಆಜ್ಞೆಯಾಗಿದೆ.

ಭಾರತ ಸರಕಾರದವರು ರಷ್ಯಾದಲ್ಲಿ 'ಇಂಡಿಯನ್ ಕ್ರಾನಿಕಲ್' ಜೈನಾದಲ್ಲಿ 'ಇಂಡಿಯಾ' ಎಂಬ ಪತ್ರಿಕೆಗಳನ್ನು ಹೊರಡಿಸುತ್ತಿರುವುದಾಗಿ ಹೇಳಲಾಗಿದೆ.

ಸ್ಪೈಪ್ರೆಸ್ಸನ್ನು ಗ್ರೀಸಿನೊಡನೆ ಸೇರಿಸಬೇಕೆಂದು ಅಲ್ಲಿಯ ಸಿನಾಸಿಗಳು ಒತ್ತಾಯ ಮಾಡುತ್ತಿರುವರು.

ಜರ್ಮನ್ ವಿ 5 ಬಾಂಬು ಇಂಗ್ಲೆಂಡಿನ ಮೇಲೆ ಧಾಳಿ ಮಾಡಿ ಸಾವುನೋವು ಉಂಟುಮಾಡಿದೆ.

ಕ್ವೆಟ್ಟಾ—ಡೋಫ್ರಿ ರೈಲು ಮಾರ್ಗದಲ್ಲಿ ಒಂದು ಮೈಲಿ ಉದ್ದ ಫಿಷ್ ಪ್ಲೇಟ್ ತೆಗೆದುಹಾಕಿದ್ದರೂ ರೈಲ್ವೇ ಅನಾಹುತವು ಸಕಾಲದಲ್ಲಿ ತಪ್ಪಿಸಲಾಯಿತು.

ಇನ್ನು ಮುಂದೆ ದೀಪದಕಡ್ಡಿಯ ಸಹಾಯವಿಲ್ಲದೆಉಪಯೋಗಿಸಬಹುದಾದ ಸಿಗರೇಟನ್ನು ಅಮೇರಿಕಾದಲ್ಲಿ ಕಂಡುಹಿಡಿದಿರುವರು. ಆ ಸಿಗರೇಟನ್ನು ಒಂದು ಗಟ್ಟಿ ಪದಾರ್ಥದ ಮೇಲೆ ಉಜ್ಜಿ ಬೆಂಕಿತಾನೇ ಹತ್ತಿಕೊಳ್ಳುವುದು.

ಮಹಾಚುನಾವಣೆ ಫಲಿತಾಂಶ

ಟೋಕಿಯೋ ಮೇಲೆ ಧಾಳಿ—

ಟೋಕಿಯೋ ಭಾಗದಲ್ಲಿ ಅಮೇರಿಕಾ ನೌಕಾ ಪಡೆ ನಡೆಸಿದ ಧಾಳಿಯು ಅತಿ ಭೀಕರವಾಗಿದ್ದು ಅದರಿಂದ ಉದ್ಭವಿಸಿದ ಹೊಗೆಯು 7000 ಅಡಿ ಎತ್ತರ ಎತ್ತರ ಹೊಂಟು ಟೋಕಿಯೋದಿಂದ ಯಾಕೋಹಾಮಾದವರೆಗೂ ಕಾಣುತ್ತಿತ್ತೆಂದು ಹೇಳಲಾಗಿದೆ.

ಂ

ಕೈಷೇಕರು ಪತ್ನಿ ತ್ಯಾಗ ಮಾಡುವರೇ—

ಚೀನಾ ದೇಶದ ಡಂಡನಾಯಕರಾದ ಚೀಂಗ್ ಕೈಷೇಕರ ಪತ್ನಿ ಈಗಾಗಲೆ ಹಲವಾರು ತಿಂಗಳಿಂದಲೂ ಸ್ವದೇಶವನ್ನು ಬಿಟ್ಟು ಅಮೇರಿಕಾ ಮೊದಲಾದ ದೇಶಗಳಲ್ಲಿ ಇರುತ್ತಿರುವರಷ್ಟೆ! ಇತ್ತೀಚಿಗೆ ಹೊರಟ ಸುದ್ದಿಯಂತೆ ಇವರಿಬ್ಬರಿಗೂ ದಾಂಪತ್ಯ ವಿಚ್ಛೇದನವಾಯಿತೆಂದೂ, ಚೀಂಗ್ ಕೈಷೇಕರು ಅನ್ಯಸ್ತ್ರೀ ರತನಾಗಿದ್ದುದನ್ನು ಕಂಡೇ ಆಕೆ ವಿದೇಶಗಮನ ಮಾಡಿದಳೆಂದೂ ಗೊಸುಗುಟ್ಟಲಾಗಿತ್ತು. ಆದರೆ ಚೀಂಗ್ ಕೈಷೇಕರು ಇದನ್ನೆಲ್ಲಾ ಸುಳ್ಳೆಂದು ನಿರಾಕರಿಸಿದ್ದಾರೆ.

(ವಾ)

ಂ

ಪ್ರಾಯಿಲಿಗೆ ಧಾರ್ಮ—

ಪೆಸಿಫಿಕ್ ದ್ವೀಪಗಳ ಅನೇಕ ರೇವು ಪಟ್ಟಣಗಳಲ್ಲಿ ಬೀದಿ ಬೀದಿಯಲ್ಲಿ ರಾತ್ರಿ ವೇಳೆ ದೀಪವಿಟ್ಟಿದ್ದರೆ ಅಲ್ಲಿ ಯಾರೋ ಪ್ರಾಯಿಲೆಯೂಗಿರುವರೆಂದು ತಿಳಿಯಬೇಕು. ಲಾಡ್ಜದ ಬಣ್ಣ ಬಗೆಬಗೆಯ ಆಹಾರ, ಹಣ್ಣುಗಳನ್ನು ಇಡುವರು. ಪೀಡೆ ಪಿಶಾಚಿಗಳು ಇವನ್ನು ತಿಂದು ಸಂತೃಪ್ತವಾದಲ್ಲಿ ಪ್ರಾಯಿಲೆ ವಾಸಿಯಾಗುವುದೆಂದು ಆ ಜನರಿಗೆ ನಂಬಿಕೆ.

ಪೆಟ್ರೋಲ್ ತೊಂದರೆಯೊದಿರೆ—

ಜಪಾನಿಗೆ ವಿಮಾನ ನಡೆಸಲು ಪೆಟ್ರೋಲ್ ತೊಂದರೆಯಾದರೆ, ಅದಕ್ಕೆ ಬದಲು ಬೇರೆ ರೀತಿ ಕಂಡುಹಿಡಿದಿರುವರಂತೆ.

ಂ ಂ

ಬರ್ಲಿನ್ನಿನ ಭದ್ರತೆ—

ಬರ್ಲಿನ್ ನಗರವನ್ನು ಕೆಲಕಾಲದಿಂದ ಬಹುಮಟ್ಟಿಗೆ ಭದ್ರಪಡಿಸುತ್ತಿದ್ದು ಈಗ ಅದು ಒಂದು ಭದ್ರವಾದ ಕೋಟೆ ಕೊತ್ತಲುಗಳಿಂದ ಕಾಪಾಡಲ್ಪಟ್ಟ ನಗರವಾಗಿ ಮಾಡಲ್ಪಟ್ಟಿದೆಯಂತೆ.

ಂ ಂ

ಜಪಾನ್ ಚಕ್ರವರ್ತಿಯು ವಿಚಾರಣೆ—

ಲಂಡನ್ ಟ್ರೇಡ್ ಯೂನಿಯನ್ ಸಮ್ಮೇಳನದಲ್ಲಿ ಜಪಾನ್ ಚಕ್ರವರ್ತಿಯನ್ನು ವಿಚಾರಣೆಗೊಳಪಡಿಸಬೇಕು ಎಂದು ನಿರ್ಣಯಿಸಿದರು.

ಂ ಂ

ತಮ್ಮ ಪಾಡಿಗೆ ತಾವು—

ಕೈರೋದಲ್ಲಿ ಅರೇಬಿಯಾದ 6 ಸಂಸ್ಥಾನಗಳು ಒಟ್ಟಿಗೆ ಸೇರಿ ತಮ್ಮದೇ ಒಂದು ಲೀಗ್ ಆಫ್ ನೇಷನ್ ಮಾಡಲು ತೀರ್ಮಾನಿಸಿದರು. ತಾವು ಇತರರಂತೆ ದೊಡ್ಡ ಜನಾಂಗವಾಗಬೇಕೆಂದು ಠರಾವು ಮಾಡಿದರು. ಫ್ರೆಂಚರ ಒಬ್ಬ ಭಾರಿ ಅಧಿಕಾರಿಯು ಇಲ್ಲಿಗೆ ಬಂದು ಇವರ ಕಾರುಬಾರನ್ನು ನೋಡುತ್ತಿರುವನು.

ಂ ಂ

ಪತ್ರಿಕಾ ಸ್ವಾತಂತ್ರ್ಯ—

ಬೆಲ್ಜಿಯಂನಲ್ಲಿ ವೃತ್ತಪತ್ರಿಕೆಗಳಿಗೆ ಸ್ವಾತಂತ್ರ್ಯವೆಂಬುದು ಇದೆಯೆ? ಮನಸಿದೆಯಲ್ಲೇ ಇದೆ ಅಷ್ಟೆ ಶಾಂತಿ ಸಂಸ್ಥಾಪನೆಯಲ್ಲಿ ಎಲ್ಲರಿಗೂ ಅನ್ವಯಿಸುವಂತೆ ಮಾಡಲು ಬೆಲ್ಜಿಯಂ ಸರ್ಕಾರ ಅಮೇರಿಕಾ ಸರಕಾರಕ್ಕೆ ಸಲಹೆಮಾಡಿದೆ.

ಮಹಾ ಚುನಾವಣೆಯಲ್ಲಿ

ಈ ಕೆಳಗೆ ಕಂಡವರು ಚುನಾಯಿತರಾದರು

ಪ್ರ. ಪ್ರ. ಸಭೆಗೆ

ಮೈಸೂರು ತಾಲ್ಲೂಕು—
ಟಿ. ಸಿ. ಹೊನ್ನಪ್ಪ
ತಿಪಸಂದೇಗೌಡರು.

ನಂಜನಗೂಡು ಟೌನ್—
ಎಸ್. ಕೆ. ಮರಿಕೆಂಪಯ್ಯ

ಚಾಮರಾಜನಗರ ತಾ ||
ಕೆ. ವಿ. ವೀರಣ್ಣ
ಸಿದ್ದವೀರಪ್ಪ
ಎಲ್. ವೆಂಕಟನಾರಣಪ್ಪ

ಚಾಮರಾಜನಗರ (ನಿಮ್ನ ವರ್ಗ)
ಜಿ. ಎಂ. ಪುಟ್ಟಯ್ಯ

ಚಾಮರಾಜನಗರ ಟೌನ್—
ಸಿ. ಡಿ. ನಾರಾಯಣರಾವ್

ಗುಂಡ್ಲುಪೇಟೆ ತಾಲ್ಲೂಕು—
ಹೆಚ್. ಕೆ. ಶಿವರುದ್ರಪ್ಪ
ಪಿ. ಎಂ. ಕೊಂಗವಲಪ್ಪ

ಬಿಸಿ ಬಿಸಿ ಯುದ್ಧ ವಾರ್ತೆ

ಅರ್ಜಂಟೈನಾವು ಅಕ್ಷ ರಾಷ್ಟ್ರಗಳ ಮೇಲೆ ಯುದ್ಧ ಸಾರುವುದು.

ಬರ್ಮಾ ಸೆಯಾಂ ರೈಲ್ವೆ ಸೇತುವೆಯು ಮಿತ್ರ ಧಾಳಿಯಿಂದ ಒಡೆಯಲ್ಪಟ್ಟಿತು.

ಜಪಾನ್ ಮಂತ್ರಿಮಂಡಲದಲ್ಲಿ ಬಹಳ ಲಾವಣಿಯಾಗುವ ಸಂಭವವಿದೆ.

ಸ್ಪೇನ್ ನದಿ ಹತ್ತಿರ ರಷ್ಯಾ—ಜರ್ಮನಿಗೆ ಭಾರೀ ಕದನ ನಡೆಯುತ್ತಿದೆ.

ಚಿನ್ನ ಬೆಳ್ಳಿ ಧಾರಣೆ

ಸವರನ್ 1 ಕ್ಕೆ	ರೂ. 50-0-0
ಚಿನ್ನ ತೊಲ 1 ಕ್ಕೆ	73-0-0
ಬೆಳ್ಳಿ "	1-4-6

ವೃಶ್ಚಿಕ

ನಿಮ್ಮ ಯೋಗ ವು ಚ ನ್ನಾ ಗಿ ದೆ ಯಾವ ಕೆಲಸಕ್ಕೂ ಅಡಚಣೆ ಇರುವದಿಲ್ಲ. ಮುನ್ನುಗ್ಗಿ ಕಾರ್ಯ ಮಾಡಿ ದ್ದೆ ಲ್ಲಿ ಜ ಯಶೀಲರಾಗಿ ಕೀರ್ತಿಗಳಿಸುವಿರಿ.

ಧನು

ಆರ್ಥಿಕ ಪರಿಸ್ಥಿತಿಯು ಪ್ರಾಸ್ತವಾಗುವ ಯೋಗವಿದೆ. ಆರೋಗ್ಯವು ತೃಪ್ತಿ ಕರವಾಗಿರುವುದಿಲ್ಲ. ಎಲ್ಲ ಬಗೆಗಳಲ್ಲೂ ನಿರಾಶೆಯನ್ನು ಹೊಂದುವಿರಿ. ಪರಮಾತ್ಮನಲ್ಲಿ ಮನಸ್ಸನ್ನು ನೆಲೆಗೊಳಿಸಿ ಎಲ್ಲ ಪರಿಸ್ಥಿತಿಗಳಿಂದ ಪಾರುಮಾಡಲು ಧ್ಯಾ ನ ಮಾಡಿರಿ.

ಮಕರ

ಲಾಭ ಕಡಿಮೆ. ಖರ್ಚು ಹೆ ಚ್ಚು. ಇನ್ನು ಸಂತೋಷವೆಲ್ಲಿಯದು ? ಸುಖ ವೆಲ್ಲಿಯದು ?

ಕುಂಭ

ಆರ್ಥಿಕವಾಗಿ ಅವ್ಯವಸ್ಥೆ. ಇತರರ ನ್ನು ಆಶ್ರಯಿಸಬೇಕಾದ ಸಂಭವವು ಒದಗಬಹುದು. ಜಾಗ್ರತೆಯೊಡನೆ ವರ್ತಿಸಿರಿ.

ಮೀನ

ಅಯೋಗ್ಯಲಾಭ. ಧನಲಾಭ. ಅಪಕೀರ್ತಿ. ಸಂತೋಷದ ವಾರ್ತೆಯನ್ನು ಕೇಳುವಿರಿ. ನೌಕರಿಯಲ್ಲಿ ಲಾಭ ವುಂಟು. ಚಿತ್ತವು ಪ್ರಸನ್ನತೆಯಿಂದ ಕೂಡಿರುತ್ತದೆ.

ಇನ್ನು 10 ವರ್ಷಗಳಲ್ಲಿ ಚಂದ್ರಮೂಡಲಕ್ಕೂ ಕೂಡ ಸಕ್ಕರೆತ್ಯಕ್ಕೂ ಮನುಷ್ಯರು ಹೋಗಿಬರಲು ನವೀನ ರೀತಿ ವಿಮಾನಗಳು ಕಟ್ಟಲಾಗುವವು. ಇವುಗಳಲ್ಲಿ ಏಕ ಕಾಲದಲ್ಲಿ 350 ಲಕ್ಷ ಮೈಲಿ ಪ್ರಯಾಣ ಮಾಡಬಹುದಂತೆ.

o o

ಸುಕ್ಕೂರಿನ ಆಹಾರದ ಇನ್ಸ್ಪೆಕ್ಟರೊಬ್ಬರು ಹತ್ತೀಬೀಜದ ಕ್ರಯವನ್ನು ಅದಲು ಬದಲು ಮಾಡಲು ಯತ್ನಮಾಡಲು ರೂ. 10000 ಲಂಚ ತಿಂದರೆಂದು ದಸ್ತಗಿರಿಯಾಗಿರುತ್ತಾರೆ.

o o

ಮದರಂಸೆಸೆ ಒಬ್ಬ ವರ್ತಕರು 7 ಆಣೆಗೆ ಮಾರಬೇಕಾಗಿದ್ದ ಗ್ರಾಮೊಫೋನ್ ಸೂಜಿಯನ್ನು 6 ರೂ. ಗೂ, 3 ಆಣೆಗೆ ಮಾರಬೇಕಾಗಿದ್ದ ಸೂಜಿಯನ್ನು 1 ಪೈಸೆ ರೂ. ಗೂ ಮಾರಿದ್ದಕ್ಕಾಗಿ 1000 ರೂ. ಜುಲ್ಮಾನೆಯಾಯಿತು.

ಈ ವಾರ ನಿಮ್ಮ ಗ್ರಹಗತಿಗಳು ಹೇಗಿವೆ ?

(ಓಂ ಜ್ಯೋತಿಷ್ಯರಿಂದ)

ಮೇಷ

ನಿಮಗೆ ಅನುಕೂಲವಾದ ಕಾಲವಿದು. ಆರೋಗ್ಯ, ಧನ, ಯಶ ಪ್ರಾಪ್ತಿಗಳುಂಟು. ಧರ್ಮದಲ್ಲಿ ಆಸಕ್ತಿ ಇರುತ್ತದೆ. ಮನಸ್ಸು ಸಂತೋಷವಾಗಿರುತ್ತದೆ.

ವೃಷಭ

ಆರೋಗ್ಯವುಂಟು. ಧನಲಾಭವುಂಟು. ಶತ್ರುಗಳಿಂದ ತೊಂದರೆಯು ಬಹುವಂತದ್ದರೂ ಅವರು ತಮ್ಮ ಕಾರ್ಯಗಳಲ್ಲಿ ವಿಫಲರಾಗುವರು.

ಮಿಥುನ

ಆರೋಗ್ಯವಿಷಯದಲ್ಲಿ ಜಾಗ್ರತದಿಂದಿರಿ. ವ್ಯವಹಾರದಲ್ಲಿ ಎಚ್ಚರಿಕೆಯಿಂದ ವರ್ತಿಸಿರಿ. ಜಾಗ್ರತೆ. ಶುಭಕಾರ್ಯಗಳಲ್ಲಿ ವಿಘ್ನಗಳು ಒದಗುವ ಸಂಭವವುಂಟು.

ಕರ್ಕಾಟಕ

ವ್ಯವಹಾರದಲ್ಲಿ ಶ್ರಮವುಂಟು. ಯೋಚನೆಯುಂಟು. ಇದುಹೊರತು ಅತಿ ಜಾಗರೂಕತೆಯೊಡನೆ ನಿಮ್ಮ ಕೆಲಸ ಕಾರ್ಯಗಳಲ್ಲಿ ಪ್ರವರ್ತಿಸ ಬೇಕಾಗಿದೆ. ಎಲ್ಲರಲ್ಲಿಯೂ ಪ್ರೇಮದೊಡನೆ ವರ್ತಿಸಿರಿ. ಹಾಗೆ ಮಾಡದಿದ್ದಲ್ಲಿ ಅಪಯಶಸ್ಸು ಪ್ರಾಪ್ತವಾಗುವುದು.

ಸಿಂಹ

ಕೆಲವಗಳೆಲ್ಲಾ ಯಾವ ಬಗೆಯ ಅಡಚಣೆಯೂ ಇಲ್ಲದೆ ನೆರವೇರುವುದು. ಧನ ಲಾಭವುಂಟು. ಮಾನಸಿಕ ಸ್ಥಿರತೆಯುಂಟು. ಉದ್ಯೋಗದಲ್ಲಿ ಕೈ ನೀಲಾಗುವುದು. ಶತ್ರುಗಳು ಮಿತ್ರರಾಗುವರು.

ಕನ್ಯಾ

ಆರ್ಥಿಕ, ಆರೋಗ್ಯ, ವ್ಯವಹಾರ ಸ್ಥಿತಿಗಳು ಉತ್ತಮ ರೀತಿಯಲ್ಲಿರುವುದಾಗಲಿ, ಮನೋಚಾಂಚಲ್ಯತೆಯು ಅಧೈರ್ಯಕ್ಕೆ ಕಾರಣವಾಗುವುದು. ಧರ್ಮ ಕಾರ್ಯಗಳಲ್ಲಿ ಪ್ರವೃತ್ತರಾಗಿದ್ದಲ್ಲಿ ಒಳ್ಳೆಯದು.

ತುಲಾ

ಯಾವ ವಿಷಯದಲ್ಲಿಯೂ ಈ ವಾರ ಉತ್ತಮವಾಗಿರುವುದಿಲ್ಲ. ಹೊಸ ಕೆಲಸಗಳಿಗೆ ಕೈ ಹಾಕದೆ ಕೃಷ್ಣನಂದ ಈ ವಾರ ಕಾಲ ಕಳೆಯಿರಿ.

ತ್ರಿಮೂರ್ತಿಗಳ ಸಮ್ಮೇಳನ

ತ್ರಿಮೂರ್ತಿಗಳು ಕ್ರಿಮಿಯಾದಲ್ಲಿನ ಯಾಲ್ಟಾದಲ್ಲಿ ಯುದ್ಧವನ್ನು ಬೇಗನೆ ಮುಗಿಸುವ ಯೋಚನೆ ಮಾಡಿದರು.

ಸಮ್ಮೇಳನವು 8 ದಿನಸ ರಾತ್ರೆ ಹಗಲು ನಡೆಯಿತು.

ಸಮ್ಮೇಳನವು 2 ನೇ ಜಾರ್ ನಿಕೊಲಾಸಿನ ಬೇಸಿಗೆ ಕಾಲದ ಲಿವಡಿಯಾ ಅರಮನೆಯಲ್ಲಿ ನಡೆಯಿತು.

ವಾಷಿಂಗ್ಟನ್ನಿಂದ ರೂಸ್ವೆಲ್ಟರು ಯಾವ ವಾಹನದಲ್ಲಿ ಹೊಂಟರೋ ಅದು ಗೊತ್ತಿಲ್ಲ. ಯಾಲ್ಟಾದಲ್ಲಿ ಒಂದು ಅವೇರಿಕ ನೌಕೆಯಲ್ಲಿದ್ದರೆಂದು ಗೊತ್ತಾಗಿದೆ.

ರೂಸ್ವೆಲ್ಟರು ಮತ್ತು ಚರ್ಚಿಲ್ಲರ ಹೆಣ್ಣುಮಕ್ಕಳು ಅವರ ತಂದೆಯ ಜೊತೆಯಲ್ಲಿ ಈ ಸಮ್ಮೇಳನಕ್ಕೆ ಬಂದಿದ್ದರು.

ಯಾಲ್ಟಾದಲ್ಲಿ ವಾಚನಾಲಯಗಳೂ ಪುಸ್ತಕಶಾಲೆಗಳೂ ನಾಟಕಶಾಲೆಗಳೂ ಹೆಚ್ಚಾಗಿವೆ. ರಷ್ಯಾದಲ್ಲಿನ ಜಾಗರ ಸುಂದರ 3 ಅರಮನೆಗಳಲ್ಲಿ ಇದೊಂದು.

ನಗರವು ಬೆಟ್ಟತಪ್ಪಲಿನಲ್ಲಿದ್ದು ನೋಡುವುದಕ್ಕೆ ರಮ್ಯವಾಗಿದೆ. ದ್ರಾಕ್ಷಿ ವ್ಯವಸಾಯ ಚೆನ್ನಾಗಿದೆ. ಪಾರ್ಕುಗಳಿವೆ.

ಆಯುರ್ವೇದ ಚಿಕಿತ್ಸೆಗೆ ಅಡಚಣೆ

ಹಿಂದೂ ಪುರದಲ್ಲಿಯೂ ಅದರ ಸುತ್ತಮುತ್ತಲೂ ಇರುವ ಗ್ರಾಮಗಳಲ್ಲಿಯೂ ಪ್ಲೇಗು ವ್ಯಾಧಿಯು ಹೆಚ್ಚು ಹಾವಳಿ ಮಾಡುತ್ತಿದೆ. ಶ್ರೀ ನಾರಾಯಣಪ್ಪನೆಂಬುವರೊಬ್ಬರು ಆಯುರ್ವೇದ ಚಿಕಿತ್ಸಾ ಪದ್ಧತಿಯನ್ನನುಸರಿಸಿ ಅನೇಕರಿಗೆ ಚಿಕಿತ್ಸೆಮಾಡಿ ಅನೇಕರನ್ನು ಯಮನ ದಂಷ್ಟ್ರಗಳಿಂದ ಬಿಡಿಸಿದರು. ಹಿಂದೂಪುರ ನಿವಾಸಿಗಳು ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಾ ಶ್ರೀ ನಾರಾಯಣಪ್ಪನವರನ್ನೂ ಸತ್ಕರಿಸಿದರು ಆದರೆ ಅಧಿಕಾರಿಗಳು ಅವರ ಚಿಕಿತ್ಸೆಯು ದೋಷಪೂರಿತವಾದುದೆಂದು ನಿರ್ಣಯಿಸಿ ಅವರಿಗೆ ಜುಲ್ಮಾನೆ ವಿಧಿಸಿರುವರು ಪ್ರತ್ಯಕ್ಷ ದೃಷ್ಟಾಂತದಿಂದ ತಮ್ಮ ಚಿಕಿತ್ಸಾವಿಧಾನದ ಮಹತ್ವವು ಎಂತಹುದೋ ಅವರು ವ್ಯಕ್ತಪಡಿಸಿದ್ದರೂ ಅವರು ಮಾಡಿದ ಸೇವಾಕಾರ್ಯಕ್ಕಾಗಿ ಅವರನ್ನು ಪ್ರಶಂಸಿಸದೆ ಜುಲ್ಮಾನೆಗೆ ಗುರಿ ಮಾಡಿರುವುದು ಅತಿ ಶೋಚನೀಯವಾದ ವಿಷಯವಾಗಿದೆ. ಪಾಪ ! ಆಯುರ್ವೇದ ಗಂಧವೂ ಇಲ್ಲದವರಿಗೆ ಆಯುರ್ವೇದದ ಮಹತ್ವವು ಎಂತು ತಿಳಿಯಬಲ್ಲದು ?

ಗೋಂಕಪುರದ ಖಾದಿ ಭಂಡಾರವನ್ನು ಪೋಲೀಸಿನವರು ತಾಳಿ ಮಾಡಿ ಬಾವುಟ, ಬ್ಯಾಡ್ಜ್ ಕಾಗದಪತ್ರಗಳನ್ನು ತೆಗೆದುಕೊಂಡುಹೋದರು.

ಆರೋಗ್ಯ ನೌಖ್ಯ ನಮ್ಮ ಜನ್ಮ ಹಕ್ಕು

— ಪ್ರತಿ ಊಟವನ್ನು ಔತಣದಂತೆ ಮಾಡಿಕೊಳ್ಳಿರಿ —



ನಿಮಗೆ ಆರೋಗ್ಯಕರವಾದ, ಸಂತಸದಾಯಕವಾದ ಊಟ, ರುಚಿಕರವಾದ ಉಪ್ಪಿನಕಾಯಿ, ಸಾರು, ಹುಳಿ, ವ್ಯಂಜನ ಬೇಕಾದರೆ ಟಿ.ಜಿ. ಹಿಂಗನ್ನು ಸ್ವಲ್ಪಹಾಕಿ. ಆಗ ನೋಡಿ ಅದರ ಗುಣ. ಒಂದು ದಿವಸ ಉಪಯೋಗಿಸಿದರೆ ಆ ಮೇಲೆ ಟಿ.ಜಿ. ಹಿಂಗನ್ನು ಪ್ರತಿದಿನವೂ ಉಪಯೋಗಿಸುತ್ತೀರಿ.

1 ಪೌಂಡ್, ಅರ್ಧ ಪೌಂಡ್, ಕಾಲು ಪೌಂಡ್ ಮತ್ತು 1 ಪಲಂಗಳಲ್ಲಿ ಎಲ್ಲಾ ವ್ಯಾಪಾರಗಾರರಲ್ಲೂ ಮತ್ತು ಈ ಕೆಳಗಿನ ವಿಳಾಸದವರಲ್ಲೂ ದೊರೆಯುವುದು.

ವಲ್ಲಭದಾಸ್ ತೇಜ್ಪಾಲ್,

ಹಿಂಗು, ಕಸ್ತೂರಿ, ಕೇಸರಿ ವ್ಯಾಪಾರಗಾರರು,

14 ಗೋವಿಂದಪ್ಪ ನಾಯಕ್ ಬೀದಿ, ಜಿ.ಟಿ. ಮುಂಬಾಸ್.